# ಪಾಠ ಯೋಜನೆ

## ಪಾಠ ಯೋಜನೆ

ಪ್ರತಿಯೊಂದು ಕ್ಷೇತ್ರದಲ್ಲೂ ಪ್ರಯತ್ನದ ಯಶಸ್ಸು ಪೂರ್ವಭಾವಿಯಾಗಿ ಹಾಕಿಕೊಂಡ ಯೋಜನೆಯನ್ನು ಅವಲಂಬಿಸಿದೆ. ಅದರಂತೆ ಒಂದು ಪಾಠವನ್ನು ಯಶಸ್ವಿಯಾಗಿ ಬೋಧಿಸಲು ಶಿಕ್ಷಕನು **ಪೂರ್ವಭಾವಿಯಾಗಿ** ಹಾಕಿಕೊಂಡ ಯೋಜನೆಯೇ ಪಾಠಯೋಜನೆ.

ತರಗತಿಯಲ್ಲಿ ಶಿಕ್ಷಕನು ಹೇಗೆ **ಬೋಧನೆ ಮಾಡಬೇಕು**? **ಏನನ್ನು ಬೋಧನೆ ಮಾಡಬೇಕು**? **ಹೇಗೆ ಕಲಿಸಬೇಕು**? **ಎಷ್ಟನ್ನು ಬೋಧಿಸಬೇಕು**?

ಮನೋವೈಜ್ಞಾನಿಕ ಹಾಗೂ ತಾತ್ವಿಕ ಹಿನ್ನೆಲೆಯಲ್ಲಿ ಆಲೋಚನೆಯನ್ನು ಆಧರಿಸಿ ತಯಾರಿಸುವ ಯೋಜನೆಯಾಗಿದೆ.

## ವ್ಯಾಖ್ಯೆಗಳು

1. **ಬಿನ್ನಿಂಗ್ & ಬಿನ್ನಿಂಗ್** – "ದಿನನಿತ್ಯದ ಪಾಠಯೋಜನೆಯು ಉದ್ದೇಶಗಳನ್ನು ವಿವರಿಸುವುದು, ವಿಷಯವಸ್ತು ಆಯ್ಕೆ ಮಾಡಿಕೊಳ್ಳವುದು ಮತ್ತು ವಿಧಾನ & ಕಾರ್ಯವನ್ನು ನಿರ್ಧರಿಸುವುದು".

2. **ಎನ್. ಎಲ್. ಬಾಸಿಂಗ್** ರವರ ಪ್ರಕಾರ – "ಸಾಧಿಸಬೇಕಾದ ಸಾಧನೆಗಳ ಹಾಗೂ ಕಲಿಕಾವಧಿಯಲ್ಲಿ ಕೈಗೊಳ್ಳುವ ಚಟುವಟಿಕೆಗಳ, ಪರಿಣಾಮವಾಗಿ ಆ ಸಾಧನೆಗಳನ್ನು ಯಾವ ನಿರ್ದಿಷ್ಟ ವಿಧಾನಗಳ ಮೂಲಕವಾಗಿ ಸಾಧಿಸಲಾಗುವುದು ಎಂಬ ನಿರೂಪಣೆಗೆ ಕೊಟ್ಟ ಶೀರ್ಷಿಕೆಯೇ ಪಾಠಯೋಜನೆ".

3. **ಆರ್. ಎಲ್. ಸ್ಟೀವನ್‌ಸನ್** – "ಶಿಕ್ಷಕ ಪಾಠವನ್ನು ಬೋಧಿಸುವ ಮೊದಲು ಯೋಜನೆ ತಯಾರಿಸಿಕೊಳ್ಳುವುದು ಅವಶ್ಯಕ. ಆದರೆ ಅದರ ಗುಲಾಮನಾಗಿ ಕಾರ್ಯ ನಿರ್ವಹಿಸಬಾರದು".

## ಪಾಠಯೋಜನೆಯ ಪ್ರಾಮುಖ್ಯತೆ.

1. ಗುರಿ ಹಾಗೂ ಉದ್ದೇಶ ಸಾಧನೆ.
2. ಶಿಕ್ಷಕರಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ.
3. ಅಪವ್ಯಯದ ತಡೆ
4. ಪರಿಪೂರ್ಣತೆ & ಪರಿಣಾಮಕತೆ.
5. ಮೌಲ್ಯಮಾಪನ ಸಾಧ್ಯ.
6. ತರಗತಿಯ ಶಿಸ್ತು.
7. ತನ್ನ ಬೋಧನೆಯ ಸ್ವಮೌಲ್ಯಮಾಪನ.
8. ಬೋಧನೆಯಲ್ಲಿ ನಿಯಂತ್ರಣ.

# ಉತ್ತಮ ಪಾಠಯೋಜನೆಯ ಲಕ್ಷಣಗಳು :

1) ಉತ್ತಮವಾಗಿ ಬರೆದು ತಯಾರಿಸಬೇಕು.

2) ಪಾಠದ ನಿರಂತರತೆಯನ್ನು ಕಾಪಾಡಬೇಕು

3) ನಿರ್ದಿಷ್ಟ ಬೋಧನಾ ತಂತ್ರಗಳನ್ನು ಒಳಗೊಂಡಿರಬೇಕು.

4) ಉತ್ತಮ ಜೋಡಣೆ ಮತ್ತು ಉತ್ತಮ ಪ್ರಶ್ನೆಗಳನ್ನು ಒಳಗೊಂಡಿರಬೇಕು.

5) ಉತ್ತಮ ಬೋಧನೋಪಕರಣಗಳನ್ನು ಹೊಂದಿರಬೇಕು.

6) ಸೂಕ್ತ ಗುರಿ ಉದ್ದೇಶಗಳನ್ನು ಹೊಂದಿರಬೇಕು.

7) ಮಕ್ಕಳ ಆಸಕ್ತಿ, ಸ್ತರ & ಕಲಿಯುವವನ ವಯಸ್ಸು ಗಮನದಲ್ಲಿರಬೇಕು

8) ಮಕ್ಕಳ ಚಟುವಟಿಕೆಯನ್ನು ತಿಳಿಸಿರಬೇಕು.

9. ವೈಯಕ್ತಿಕ ಭಿನ್ನತೆಯನ್ನು ಗಮನದಲ್ಲಿಡಬೇಕು.

10. ಬೇರೆ ಬೇರೆ ಪುಸ್ತಕಗಳ ನೆರವು ಪಡೆಯಬೇಕು.

11. ಸಹಸಂಬಂಧ, ಸೃಜನಾತ್ಮಕತೆ ಹೊಂದಿರಬೇಕು.

12. ನೀಡಬಹುದಾದ ಗೃಹಕೆಲಸ ದತ್ತಕಾರ್ಯಗಳನ್ನು ಒಳಗೊಂಡಿರಬೇಕು.

13. ಸ್ವಯಂ ವಿಮರ್ಶೆಗೆ ಸ್ಥಳಾವಕಾಶ ಬಿಟ್ಟಿರಬೇಕು.

# ಪಾಠಯೋಜನೆಯಿಂದ ಶಿಕ್ಷಕನಿಗೆ ಆಗುವ ಅನುಕೂಲಗಳು

ಬೋಧನಾ ಪಾಠಕ್ಕೆ ಸಾಮಾನ್ಯ & ನಿರ್ದಿಷ್ಟ ಬೋಧನಾ ಉದ್ದೇಶಗಳನ್ನು ರೂಪಿಸಲು ಸಹಾಯಕವಾಗುತ್ತದೆ.

1. ಶಿಕ್ಷಕನಿಗೆ ಬೋಧನಾ ಅಂಶ, ಪರಿಕಲ್ಪನೆಗಳ ಸ್ಪಷ್ಟ ತಿಳುವಳಿಕೆ ಉಂಟಾಗುತ್ತದೆ.
2. ಶಿಕ್ಷಕನಿಗೆ ಅಗತ್ಯವಾಗಿ ಬೇಕಾದ ಆತ್ಮವಿಶ್ವಾಸವನ್ನು ಬೆಳೆಸುತ್ತದೆ.
3. ಶಿಕ್ಷಕನನ್ನು ಶಿಸ್ತಿನಿಂದ, ಅಚ್ಚುಕಟ್ಟಾಗಿ, ಕ್ರಮಬದ್ಧವಾಗಿ ಬೋಧನೆಗೆ ಕೊಂಡೊಯ್ಯುತ್ತದೆ.
4. ತರಗತಿಯನ್ನು ಶಿಸ್ತಿಗೆ ಒಳಪಡಿಸುತ್ತದೆ & ಕಲಿಕಾ ಪ್ರಕ್ರಿಯೆ ಸುಗಮವಾಗುತ್ತದೆ.
5. ವಿದ್ಯಾರ್ಥಿಗಳ ಮೌಲ್ಯಮಾಪನಕ್ಕೆ ಸಹಾಯಕ.
6. ಶಿಕ್ಷಕನ ಬೋಧನೆಯ ಸ್ವ – ಮೌಲ್ಯಮಾಪನಕ್ಕೆ ಅನುಕೂಲ.
7. ಶಿಕ್ಷಕ – ವಿದ್ಯಾರ್ಥಿಗಳ ಸಮಯದ ಅಪವ್ಯಯ ತಡೆಯುತ್ತದೆ.
8. ವಿದ್ಯಾರ್ಥಿಗಳ ಅಭಿರುಚಿ, ಆಸಕ್ತಿ & ಸಾಮರ್ಥ್ಯಕ್ಕೆ ಅನುಗುಣವಾಗಿ ಬೋಧನೆಗೆ ಸಹಾಯಕ.
9. ಪಾಠೋಪಕರಣಗಳ ಆಯ್ಕೆ & ಸಂದರ್ಭೋಚಿತ ಬಳಕೆಗೆ ತಿಳುವಳಿಕೆ ನೀಡುತ್ತದೆ.
10. ಸೃಜನಾತ್ಮಕ ಹೋಲಿಕೆ, ಪ್ರಚಲಿತ ಅಂಶ, ಸಹಸಂಬಂಧದ ಬಗೆಗೆ ತಿಳುವಳಿಕೆ ನೀಡುತ್ತದೆ.

## ಪಾಠಯೋಜನೆಯ ಅವಗುಣಗಳು :

1. ಪಾಠಯೋಜನೆಯು ಒಂದೇ ಅವಧಿಗೆ ಸೀಮಿತವಾಗಿದೆ.
2. ಇಂತಿಷ್ಟೇ ಪಾಠಮಾಡಬೇಕೆಂಬುದು ಇದರ ಯೋಜನೆ.
3. ಪಾಠಯೋಜನೆಯನ್ನು ತಯಾರಿಸಲು ಸಮಯದ ವ್ಯಯ.
4. ಶಿಕ್ಷಕರಿಗೆ ಶ್ರಮದಾಯಕ.
5. ಪಾಠಯೋಜನೆಯ ಎಲ್ಲಾ ಹಂತಗಳನ್ನು ನಿಗದಿತ ಅವಧಿಯಲ್ಲಿ ಸಾಧಿಸುವುದು ಕಷ್ಟ ಸಾಧ್ಯ.
6. ನಿಗಧಿತ ಅವಧಿಯಲ್ಲಿ ಪಠ್ಯಕ್ರಮ ಮುಗಿಸುವುದು ಅಸಾಧ್ಯ.
7. ಕೇವಲ ಶಿಕ್ಷಕ ವೃತ್ತಿಗೆ ತರಬೇತುಗೊಳ್ಳುವವರಿಗೆಮಾತ್ರ ಬಳಸಲ್ಪಡುತ್ತದೆ.

# ಪಾಠಯೋಜನೆಯ ಹಂತಗಳು

- **ಜೆ.ಇ.ಹರ್ಬಾರ್ಟ್** (1776–1841) : – "ಎಂಬ ಶಿಕ್ಷಣ ತಜ್ಞರು ಪಾಠಯೋಜನೆಗೆ ಐದು ಹಂತಗಳನ್ನು ಸೂಚಿಸಿದ್ದಾರೆ. ಅವುಗಳನ್ನೇ ಹರ್ಬಾರ್ಟ್‌ರವರ ಪಂಚಸೋಪಾನಗಳು ಎಂದು ಕರೆಯುತ್ತೇವೆ".
- **ಝಿಲ್ಲರ್** & **ರಾಮ್** : – "ಎಂಬುವವರು ಹರ್ಬಾರ್ಟ್‌ರವರ ಪಾಠಯೋಜನೆಯ ಹಂತಗಳನ್ನು ನವೀಕರಿಸಿ ಸಾಮಾನ್ಯವಾಗಿ ಎಲ್ಲ ವಿಷಯಗಳ ಜ್ಞಾನ ಪಾಠಗಳಿಗೂ ಅನ್ವಯಿಸಬಹುದಾದ ಐದು ಹಂತಗಳನ್ನು ಸೂಚಿಸಿದ್ದಾರೆ".

❑ _ಹರ್ಬಾರ್ಟ್‌ರ ಪಂಚಸೋಪಾನಗಳು.

ಅ) ಪೂರ್ವಸಿದ್ಧತೆ.

ಆ) ಬೆಳವಣಿಗೆ.

ಇ) ಸಮನ್ವಯ.

ಈ) ಸಾಮಾನ್ಯೀಕರಣ.

ಉ) ಅನ್ವಯ.

# ಮಾರ್ಪಾಡು ಹೊಂದಿದ ನಂತರದ ಐದು ಹಂತಗಳು

1. ಪೀಠಿಕೆ – Introduction / Motivation.
2. ಉದ್ದೇಶ ಕಥನ / ನಿರೂಪಣೆ – Statement of aim
3. ಬೆಳವಣಿಗೆ – Development / Presentation
4. ಪುನರಾವರ್ತನೆ – Recapitulation
5. ಗೃಹಕಾರ್ಯ – Home assignment

# ಪಾಠಯೋಜನೆಯ ಆಯಾಮ

## ಲಂಬ ಆಯಾಮ

- ಪೀಠಿಕೆ
- ಉದ್ದೇಶನಿರೂಪಣೆ
- ಬೆಳವಣಿಗೆ
- ಪುನರಾವರ್ತನೆ
- ಗೃಹಪಾಠ

## ಸಮತಲ ಆಯಾಮ

<table>
<tr><td rowspan="2">ವಿಷಯ ವಿಶ್ಲೇಷಣೆ</td><td rowspan="2">ನಿರೀಕ್ಷಿತ ಕಲಿಕಾಫಲಗಳು</td><td colspan="2">ಕಲಿಕಾನುಭವಗಳು</td><td rowspan="2">ಮೌಲ್ಯಮಾಪನ</td></tr>
<tr><td>ಶಿಕ್ಷಕರ ಚಟುವಟಿಕೆಗಳು</td><td>ವಿದ್ಯಾರ್ಥಿ ಚಟುವಟಿಕೆಗಳು</td></tr>
</table>

## ಗದ್ಯಪಾಠ 4

### ಸಾರ್ಥಕ ಬದುಕಿನ ಸಾಧಕ

**ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ**

ಡಿ.ವಿ.ಜಿ. ಅವರು ತಮ್ಮೊಡನೆ ಮಾತು ನಿಲ್ಲಿಸಿಬಿಟ್ಟರೆಂದು ದಿವಾನ್ ಮಿರ್ಜಾ ಸಾಹೇಬರಿಗೆ ಕಳವಳವಾಗಿ ಹೋಗಿತ್ತು. ಆಪ್ತರೆದುರು ಅದನ್ನು ತೋಡಿಕೊಂಡರು. ತಮ್ಮದು ಏನೂ ತಪ್ಪಿಲ್ಲ ಎಂದರು. ಅದಕ್ಕಾಗಿ ಅವರಿವರ ಮೂಲಕ ಪ್ರಯತ್ನ ಕೂಡ ಮಾಡಿದರು. ಆ ಕಾಲದ ದೊಡ್ಡ ದಿವಾನರನ್ನೂ ತಮ್ಮ ಸ್ನೇಹಕ್ಕಾಗಿ ಹೀಗೆ ಹಾತೊರೆಯುವಂತೆ ಮಾಡಿದ ವ್ಯಕ್ತಿಯೇನು ಸಾಮಾನ್ಯರೇ?

ಹಾಗೆಂದೂ ಅವರೇನಿ ದೊಡ್ಡದೊಡ್ಡ ಪಡೆದವರಲ್ಲ, ಎಸ್.ಎಸ್.ಎಲ್.ಸಿ. ಕೂಡಾ ದಾಟದ ಓದು. ಭಾರಿ ಶ್ರೀಮಂತರೋ ಎಂದರೆ ದಿನದಿನದ ಅಗತ್ಯ ಪೂರೈಸಿದ್ದೇ ಹೆಚ್ಚು ಎನ್ನುವಂತ ಕೆಲಸ. ಸರ್ಕಾರಿ ಉದ್ಯೋಗವಲ್ಲವಾಗಿ ದೊಡ್ಡ ಅಧಿಕಾರದ ಮಾತಂತು ಇಲ್ಲವೇ ಇಲ್ಲ. ಆದರೆ ಮೈಸೂರು ರಾಜ್ಯದ ಪರಮೋಚ್ಛ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು.

ಇಂಥಾ ಸತ್ವಶಾಲಿ ವ್ಯಕ್ತಿತ್ವ ಡಿವಿಜಿಗೆ ಬಂದದ್ದು ಹೇಗೆ? ಕೇವಲ ಶೀಲ, ವಿವೇಕ, ನಿಸ್ಪೃಹತೆ, ಸ್ವಯಂ ಆರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ, ಮಿರ್ಜಾರ ಕಾಲಕ್ಕೆ ಡಿವಿಜಿ ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

ಡಿ.ವಿ.ಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಗೆ ಸೇರಿದ ಮುಳಬಾಗಿಲು. ಅವರದು ವೇದಶಾಸ್ತ್ರ ಸಂಪನ್ನರಾದ ಹಿರಿಯರಿದ್ದ ಕುಟುಂಬ. ಅವರ ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಡಿ.ವಿ.ಜಿ ಅವರ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿದ ವ್ಯಕ್ತಿಗಳು ಇಬ್ಬರು. ಒಬ್ಬರು ಅವರ ಅಜ್ಜಿ, ಎಂದರೆ ತಾಯಿಯ ತಾಯಿ ಸಾಕಮ್ಮ. ಮಹರ್ಷಿಪ್ರಾಯರಾದ ಚೇತನ ಎಂದು ಡಿ.ವಿ.ಜಿ. ಅವರನ್ನು ವರ್ಣಿಸಿದ್ದಾರೆ. ಇನ್ನೊಬ್ಬರು ಅವರ ಸೋದರಮಾವ ತಿಮ್ಮಪ್ಪ. ಪ್ರಸಿದ್ಧ ಕೃತಿಯಾದ ಮಂಕುತಿಮ್ಮನ ಕಗ್ಗ ತಿಮ್ಮ ಅವರ ಹೃದಯಸ್ಪರ್ಶಿಯಾದ ಚಿತ್ರಣವಿದೆ. ಆಧಾರವಾದ ವ್ಯಕ್ತಿತ್ವ ಈ ತಿಮ್ಮಪ್ಪನವರದೇ.

- **ಪಾಠದ ಸಂಖ್ಯೆ** : 04 ಅವಧಿ 03

- **ಘಟಕ** : ಸಾರ್ಥಕ ಬದುಕಿನ ಸಾಧಕ

- **ಸಂಗತಿ** : ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರ ಜೀವನ ಮತ್ತು ಸಾಧನೆ ಹಾಗೂ ಡಿ.ವಿ.ಜಿ ಯವರ ನಡುವಿನ ಸಂಬಂಧ.

- **ಪೂರ್ವ ಜ್ಞಾನ** :

  ವಿದ್ಯಾರ್ಥಿಗಳು ಈಗಾಗಲೇ ಕನ್ನಡ ನಾಡಿನ ಅನೇಕ ಕವಿಗಳ ಹಾಗೂ ಅವರ ಸಾಧನೆಗಳ ಕುರಿತು ಸಂಕ್ಷಿಪ್ತವಾಗಿ ತಿಳಿದುಕೊಂಡಿದ್ದಾನೆ.

# ಕನ್ನಡ ಭಾಷಾ ಬೋಧನೆಯ ಸಾಮಾನ್ಯ ಉದ್ದೇಶಗಳು :

1. ವಿದ್ಯಾರ್ಥಿಯು ಕನ್ನಡ ಭಾಷಾಭಿಮಾನವನ್ನು ಬೆಳೆಸಿಕೊಳ್ಳುವವನು.
2. ವಿದ್ಯಾರ್ಥಿಯು ಕನ್ನಡ ಭಾಷೆಯ ಶಬ್ಧ ಭಂಡಾರವನ್ನು ಹೆಚ್ಚಿಸಿಕೊಳ್ಳುವನು.
3. ವಿದ್ಯಾರ್ಥಿಯು ಕನ್ನಡ ಭಾಷೆಯ ಕೌಶಲಗಳನ್ನು ಬೆಳೆಸಿಕೊಳ್ಳುವನು.
4. ವಿದ್ಯಾರ್ಥಿಯು ಕನ್ನಡ ಸಾಹಿತ್ಯದ ಬಗೆಗೆ ಆಸಕ್ತಿ ಬೆಳೆಸಿಕೊಳ್ಳುವನು.
5. ವಿದ್ಯಾರ್ಥಿಯು ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವ್ಯಕ್ತವಾದ ಜೀವನ ಮೌಲ್ಯಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುವನು.
6. ವಿದ್ಯಾರ್ಥಿಯು ಕನ್ನಡ ಪದದ ಉತ್ಪತ್ತಿ ಮತ್ತು ಬೆಳವಣಿಗೆಯನ್ನು ತಿಳಿದುಕೊಳ್ಳುವನು.

## ಬೋಧನಾ ಅಂಶಗಳು/ಪರಿಕಲ್ಪನೆಗಳ ರೂಪಿಸುವಿಕೆ

1. ಲೇಖಕರ ಪರಿಚಯ (ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ್)
2. ಡಿ.ವಿ.ಜಿ ಹಾಗೂ ದಿವಾನ್ ಮಿರ್ಜಾಇಸ್ಮಾಯಿಲ್ ರವರ ಸ್ನೇಹ ಸಂಬಂಧ
3. ಡಿ.ವಿ.ಜಿ ಅವರ ಜೀವನ ಶೈಲಿ
4. ವಾಕರಣಾಂಶ (ಸವರ್ಣದೀರ್ಘ ಸಂಧಿ)

## ನಿರ್ದಿಷ್ಟ ಬೋಧನಾ ಉದ್ದೇಶಗಳು: (ಈ ಪಾಠದ ಕೊನೆಯಲ್ಲಿ)

1. **ಜ್ಞಾನ** :

- ವಿದ್ಯಾರ್ಥಿಯು ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ್‌ರು ಜನಿಸಿದ ವರ್ಷವನ್ನು ಸ್ಮರಿಸುತ್ತಾನೆ.
- ವಿದ್ಯಾರ್ಥಿಯು ಡಿ.ವಿ.ಜಿಯವರ ಭಾವಚಿತ್ರವನ್ನು ಗುರುತಿಸುತ್ತಾನೆ.

2. **ಗ್ರಹಿಕೆ** :

- ವಿದ್ಯಾರ್ಥಿಯು ಡಿ.ವಿ.ಜಿ ಹಾಗೂ ದಿವಾನ್ ಮಿರ್ಜಾಇಸ್ಮಾಯಿಲ್ ರವರ ಸ್ನೇಹ ಸಂಬಂಧವನ್ನು ವಿವರಿಸುತ್ತಾರೆ.
- ವಿದ್ಯಾರ್ಥಿಯು ಸವರ್ಣದೀರ್ಘ ಸಂಧಿಯ ನಿಯಮವನ್ನು ವ್ಯಾಖ್ಯಾನಿಸುತ್ತಾನೆ.

3. **ಅಭಿವ್ಯಕ್ತಿ** :

- ವಿದ್ಯಾರ್ಥಿಯು ಪ್ರಸ್ತುತ ಗದ್ಯಭಾಗವನ್ನು ಸೂಕ್ತ ಸ್ವರಭಾರದೊಂದಿಗೆ ಓದುತ್ತಾನೆ.
- ವಿದ್ಯಾರ್ಥಿಯು ಪ್ರಸ್ತುತ ಗದ್ಯಭಾಗದಲ್ಲಿನ ಹೊಸಪದಗಳನ್ನು ತನ್ನ ಸ್ವಂತ ವಾಕ್ಯದಲ್ಲಿ ಬಳಸುತ್ತಾನೆ.

4. **ಪ್ರಶಂಸೆ** :

- ವಿದ್ಯಾರ್ಥಿಯು ಡಿ.ವಿ.ಜಿ ಅವರ ಜೀವನ ಶೈಲಿಯನ್ನು ಮೆಚ್ಚುತ್ತಾನೆ.
- ವಿದ್ಯಾರ್ಥಿಯು ಡಿ.ವಿ.ಜಿ ಹಾಗೂ ದಿವಾನ್ ಮಿರ್ಜಾಇಸ್ಮಾಯಿಲ್ ರವರ ಸ್ನೇಹ ಸಂಬಂಧವನ್ನು ಆನಂದಿಸುತ್ತಾನೆ.

## ಕಲಿಕೋಪಕರಣಗಳು:

1. ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಭಾವಚಿತ್ರ
2. ಡಿ.ವಿ.ಜಿ ಯವರ ಭಾವಚಿತ್ರ
3. ಕೋಲಾರ ಜಿಲ್ಲೆಯ ನಕ್ಷೆ
4. ಸವರ್ಣದೀರ್ಘ ಸಂಧಿಯ ನಿಯಮದ ಚಾರ್ಟ್


## ಪಠ್ಯಪುಸ್ತಕದ ಹೊರತಾದ ಉಲ್ಲೇಖಗಳು:

- ಮಂಕುತಿಮ್ಮನ ಕಗ್ಗ – ಡಿ. ವಿ. ಗುಂಡಪ್ಪ
- ದೀಪದ ಮಲ್ಲಿಗೆ – ಡಾ. ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ.

| ವಿಷಯ ವಿಶ್ಲೇಷಣೆ | ನಿರೀಕ್ಷಿತ ಕಲಿಕಾಫಲಗಳು | ಕಲಿಕಾ ಅನುಭವಗಳು | | ಮೌಲ್ಯ ಮಾಪನ |
|---|---|---|---|---|
| | | ಶಿಕ್ಷಕರ ಚಟುವಟಿಕೆಗಳು | ವಿದ್ಯಾರ್ಥಿಗಳ ಚಟುವಟಿಕೆಗಳು | |
| ***ಪೀಠಿಕೆ*** : (ಶಿಕ್ಷಕರು ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಪರೀಕ್ಷಿಸುತ್ತಾ ಪ್ರಸ್ತುತ ಪಾಠದ ಕಡೆಗೆ ಗಮನಸೆಳೆಯುತ್ತಾರೆ.) | | ಪ್ರೀತಿಯ ವಿದ್ಯಾರ್ಥಿಗಳೇ ಈಗಾಗಲೇ ನೀವು ಜೀವನದಲ್ಲಿ ಅನೇಕ ಸಾಧನೆಯನ್ನು ಮಾಡಿದ ಕವಿಗಳ ಹಾಗೂ ಅವರ ಜೀವನ ಕ್ರಮಗಳನ್ನು ಸಂಕ್ಷಿಪ್ತವಾಗಿ ತಿಳಿದುಕೊಂಡಿದ್ದೀರಿ. ಹಾಗಾದರೆ ಹೇಳಿ......................... | | |
| | ವಿದ್ಯಾರ್ಥಿಯು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರ ಹೆಸರುಗಳನ್ನು ಸ್ಮರಿಸುತ್ತಾನೆ. | 1. **ಸಾಧಕರು ಎಂದರೆ ಯಾರು**? | ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಸಾಧಕರು ಎಂದು ಕರೆಯುತ್ತಾರೆ.. | |
| | | | | |

| | | | | |
|---|---|---|---|---|
| | ವಿದ್ಯಾರ್ಥಿಯು ಸಾಧಕರ ಬದುಕು ಸಾರ್ಥಕವಾಗುವ ಕ್ಷಣಗಳನ್ನು ಸ್ಮರಿಸುತ್ತಾನೆ. | **4. ಸಾಧಕರ ಬದುಕು ಯಾವಾಗ ಸಾರ್ಥಕ ಆಗುತ್ತದೆ?** | ಜೀವನದಲ್ಲಿ ಅಂದುಕೊಂಡ ಗುರಿಗಳು ಈಡೇರಿದಾಗ ಅಥವಾ ಯಶಸ್ಸುಗಳನ್ನು ಕಂಡಾಗ ಸಾಧಕರ ಬದುಕು ಸಾರ್ಥಕ ಆಗುತ್ತದೆ. | |
| | | **5. ಸಾರ್ಥಕ ಬದುಕಿನ ಕ್ಷಣಗಳನ್ನು ತಿಳಿಸಿರಿ.** | ಅಸಮರ್ಪಕ ಉತ್ತರ | |

| |
|---|
| ***ಗುರಿ ನಿರೂಪಣೆ*** : – ಹಾಗಾದರೆ ಪ್ರೀತಿಯ ವಿದ್ಯಾರ್ಥಿಗಳೆ ಇಂದಿನ ತರಗತಿಯಲ್ಲಿ ನಾವು ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಬರೆದ "ಸಾರ್ಥಕ ಬದುಕಿನ ಸಾಧಕ" ಎಂಬ ಗದ್ಯಪಾಠದಲ್ಲಿ ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಪರಿಚಯ, ಡಿ.ವಿ.ಜಿ ಹಾಗೂ ಮಿರ್ಜಾಇಸ್ಮಾಯಿಲ್‌ರ ಸ್ನೇಹಸಂಬಂಧ, ಡಿ.ವಿ.ಜಿ ಯವರ ಜೀವನಕ್ರಮ ಮತ್ತು ವಾಕರಣಾಂಶದ ಕುರಿತು ತಿಳಿದುಕೊಳ್ಳೋಣ. |

| | | | | |
|---|---|---|---|---|
| ***ಲೇಖಕರ ಪರಿಚಯ*** : ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು. ಕ್ರಿ.ಶ.1939 ಅಕ್ಟೋಬರ್ 29 ರಂದು ಶಿವಮೊಗ್ಗದಲ್ಲಿ ಜನಿಸಿದರು. ತಂದೆ : ಶಿವರಾಮ ಭಟ್ಟ, | ವಿದ್ಯಾರ್ಥಿಯು ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಜೀವನ ಕ್ರಮ ಹಾಗೂ ಅವರ ಕೃತಿಗಳನ್ನು ಅರ್ಥೈಸುತ್ತಾನೆ. |  ಡಾ.ಎನ್.ಎಸ್.ಲಕ್ಷ್ಮೀನಾರಾಯಣ | ವಿದ್ಯಾರ್ಥಿಯು ಡಾ.ಎನ್.ಎಸ್.ಲಕ್ಷ್ಮೀನಾರಾಯಣ | |

| | | | | |
|---|---|---|---|---|
| | ಡಾ.ಎನ್.ಎಸ್.ಲಕ್ಷೀನಾರಾಯಣ ಭಟ್ಟರು ಜನಿಸಿದ ವರ್ಷ ಕ್ರಿ.ಶ. 1939 ಅಕ್ಟೋಬರ್ 29 ಎಂದು ಸ್ಮರಿಸುತ್ತಾನೆ. | ಡಾ.ಎನ್.ಎಸ್.ಲಕ್ಷೀನಾರಾಯಣ ಭಟ್ಟರು ಜನಿಸಿದ ವರ್ಷ ಯಾವುದು? | ಡಾ.ಎನ್.ಎಸ್.ಲಕ್ಷೀನಾರಾಯಣ ಭಟ್ಟರು ಜನಿಸಿದ ವರ್ಷ ಕ್ರಿ.ಶ. 1939 ಅಕ್ಟೋಬರ್ 29. | |
| | ಡಾ.ಎನ್.ಎಸ್.ಲಕ್ಷೀನಾರಾಯಣ ಭಟ್ಟರ ತಂದೆ ಶಿವರಾಮ್ ಭಟ್, ತಾಯಿ ಮೂಕಾಂಬಿಕೆ ಎಂದು ಹೆಸರಿಸುತ್ತಾನೆ. | ಡಾ.ಎನ್.ಎಸ್.ಲಕ್ಷೀನಾರಾಯಣ ಭಟ್ಟರ ತಂದೆ ತಾಯಿಯವರ ಹೆಸರೇನು ? | ಡಾ.ಎನ್.ಎಸ್.ಲಕ್ಷೀನಾರಾಯಣ ಭಟ್ಟರ ತಂದೆ ಶಿವರಾಮ್ ಭಟ್, ತಾಯಿ ಮೂಕಾಂಬಿಕೆ | ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಪ್ರಾಧ್ಯಾಪಕರಾಗಿದ್ದ ವಿಶ್ವವಿದ್ಯಾನಿಲಯ ಯಾವುದು? |
| **ಮಾದರಿ ವಾಚನ** :<br>ಡಿ.ವಿ,ಜಿ. ------------------------------------------------------------ ತಿಮ್ಮಪ್ಪನವರದೇ. | ವಿದ್ಯಾರ್ಥಿಯು ಶಿಕ್ಷಕರ ಮಾದರಿ ವಾಚನವನ್ನು ಅರ್ಥಪೂರ್ಣವಾಗಿ ಗ್ರಹಿಸುತ್ತಾನೆ. | ಶಿಕ್ಷಕರು ಯಾವುದೇ ತಪ್ಪುಗಳಿಲ್ಲದೇ ಸೂಕ್ತ ಸ್ವರಭಾರದೊಂದಿಗೆ ಅರ್ಥಪೂರ್ಣವಾಗಿ ಮಾದರಿ ವಾಚನ ಮಾಡುತ್ತಾರೆ | ಶಿಕ್ಷಕರ ಮಾದರಿ ವಾಚನವನ್ನು ಗಮನವಿಟ್ಟು ಆಲಿಸುತ್ತಾನ . | |
| **ಹೊಸಪದಗಳ ಅರ್ಥ** :<br>1. ಕಳವಳ = ತಳಮಳ (ಚಿಂತೆ)<br>2. ನಿಸ್ಪೃಹತೆ = ವಿರಾಗಿ<br>3. ಪರಮೋಚ್ಚ = ಅತ್ಯುನ್ನತ<br>4. ಸತ್ವಶಾಲಿ = ಶೂರ, ಧೀರ | ವಿದ್ಯಾರ್ಥಿಯು ಹೊಸಪದಗಳ ಅರ್ಥವನ್ನು ಅರ್ಥೈಸುತ್ತಾನೆ. | ಶಿಕ್ಷಕರು ಹೊಸ ಪದಗಳ ಅರ್ಥವನ್ನು ವಿವರಿಸುತ್ತಾರೆ.<br>(ಶಿಕ್ಷಕರು ಹೊಸ ಪದಗಳಲ್ಲಿ ಯಾವುದಾದರೊಂದು ಹೊಸ ಪದವನ್ನು ತನ್ನ ಸ್ವಂತ ವಾಕ್ಯದಲ್ಲಿ ಪ್ರಯೋಗಿಸುತ್ತಾನೆ. ಉದಾ : ಬರಗಾಲದಿಂದ ರೈತರು ಕಳವಳಗೊಂಡರು.) | ವಿದ್ಯಾರ್ಥಿಯು ಹೊಸಪದಗಳ ಅರ್ಥವನ್ನು ಗಮನವಿಟ್ಟು ಆಲಿಸುತ್ತಾನೆ. | |

| | | | | |
|---|---|---|---|---|
| | ವಿದ್ಯಾರ್ಥಿಯು ಉಳಿದ ಹೊಸ ಪದಗಳನ್ನು ತನ್ನ ಸ್ವಂತ ವಾಕ್ಯದಲ್ಲಿ ಪ್ರಯೋಗಿಸುತ್ತಾನೆ. | ಶಿಕ್ಷಕರು ಉಳಿದ ಹೊಸಪದಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಲು ವಿದ್ಯಾರ್ಥಿಗಳಿಗೆ ಸೂಚನೆ ನೀಡುತ್ತಾರೆ | 1. **ನಿಸ್ಪೃಹತೆ** : ಮದರ್ ತೇರೆಸಾರವರು ಸಮಾಜಕ್ಕಾಗಿ ನಿಸ್ಪೃಹತೆ ಜೀವನವನ್ನು ನಡೆಸಿದರು. 2 **ಪರಮೋಚ್ಛ** : ಸುಪ್ರಿಂ ಕೋರ್ಟ್ ಭಾರತದ ಪರಮೋಚ್ಛ ನ್ಯಾಯಾಲಯವಾಗಿದೆ. 3. **ಸತ್ವಶಾಲಿ** : ಅರ್ಜುನನು ಬಿಲ್ಲು ವಿದ್ಯೆಯಲ್ಲಿ ಅತ್ಯಂತ ಸತ್ವಶಾಲಿಯಾಗಿದ್ದನು. | . |
| ***ಕೇಂದ್ರ ಪ್ರಶ್ನೆ*** | | ❖ ಡಿ.ವಿ.ಜಿ ಹಾಗೂ ಮಿರ್ಜಾಇಸ್ಮಾಯಿಲ್‌ರ ನಡುವಿನ ಸ್ನೇಹ ಸಂಬಂಧದ ಔಚಿತ್ಯವನ್ನು ವಿವರಿಸಿರಿ. | ಅಸಮರ್ಪಕ ಉತ್ತರ | |
| ***ಮೌನ ಓದು*** | ವಿದ್ಯಾರ್ಥಿಯು ಪ್ರಸ್ತುತ ಗದ್ಯಭಾಗವನ್ನು ಅರ್ಥಗ್ರಹಿಕೆಯೊಂದಿಗೆ ಮೌನವಾಗಿ ಓದುತ್ತಾನೆ | ಶಿಕ್ಷಕರು ವಿದ್ಯಾರ್ಥಿಗಳಿಗೆ ಕೆಲವು ಸೂಚನೆಗಳನ್ನು ನೀಡುವುದರ ಮೂಲಕ ಮೌನ ಓದಿಗೆ ಅವಕಾಶ ಮಾಡಿಕೊಡುತ್ತಾರೆ. | ವಿದ್ಯಾರ್ಥಿಯು ಕೇಂದ್ರ ಪ್ರಶ್ನೆಯನ್ನು ಗಮನದಲ್ಲಿಟ್ಟುಕೊಂಡು ಮೌನವಾಗಿ ಓದುತ್ತಾನೆ | |

| | | | | |
|---|---|---|---|---|
| ***ಪಾಠದ ಬೆಳವಣಿಗೆ*** :<br>2. ***ಡಿ.ವಿ.ಜಿ ಹಾಗೂ ಮಿರ್ಜಾರ ನಡುವಿನ ಸ್ನೇಹ ಸಂಬಂಧ*** : ಡಿ.ವಿ.ಜಿ ಯವರು ಸಾಹಿತ್ಯ ಕ್ಷೇತ್ರದಲ್ಲಿ ಆಮೂಲಾಗ್ರ ಸೇವೆಯನ್ನು ಮಾಡಿದ ಧೀಮಂತ ವ್ಯಕ್ತಿ. ಇವರು ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಇಬ್ಬರೂ ಉತ್ತಮ ಸ್ನೇಹವನ್ನು ಹೊಂದಿದ್ದರು. ಒಂದು ದಿನ ಇಬ್ಬರೂ ಮಾತು ಬಿಟ್ಟು ಮತ್ತೆ ಅದನ್ನು ಉಳಿಸಿಕೊಳ್ಳಲು ಹಾತೊರೆಯುತ್ತಿದ್ದರು. | ವಿದ್ಯಾರ್ಥಿಯು ಡಿ. ವಿ.ಜಿ ಹಾಗೂ ಮಿರ್ಜಾರ ನಡುವಿನ ಸ್ನೇಹ ಸಂಬಂಧವನ್ನು ಮೆಚ್ಚುತ್ತಾನೆ. | ಶಿಕ್ಷಕರು ಡಿ. ವಿ.ಜಿ ಹಾಗೂ ಮಿರ್ಜಾರ ನಡುವಿನ ಸ್ನೇಹ ಸಂಬಂಧವನ್ನು ವಿಶ್ಲೇಷಣಾತ್ಮಕವಾಗಿ ವಿವರಿಸುತ್ತಾರೆ. | ವಿದ್ಯಾರ್ಥಿಯು ಡಿ. ವಿ.ಜಿ ಹಾಗೂ ಮಿರ್ಜಾರ ನಡುವಿನ ಸ್ನೇಹ ಸಂಬಂಧದ ವಿವರಣೆಯನ್ನು ಗಮನವಿಟ್ಟು ಆಲಿಸುತ್ತಾನೆ. | |
| | ವಿದ್ಯಾರ್ಥಿಯು ಡಿ. ವಿ.ಜಿ ಯವರ ಭಾವಚಿತ್ರವನ್ನು ಗುರುತಿಸುತ್ತಾನೆ. | ಶಿಕ್ಷಕರು ಡಿ. ವಿ.ಜಿ ಯವರ ಭಾವಚಿತ್ರವನ್ನು ತೋರಿಸುತ್ತಾರೆ<br> | ವಿದ್ಯಾರ್ಥಿಯು ಡಿ.ವಿ.ಜಿ ಯವರ ಭಾವಚಿತ್ರವನ್ನು ವೀಕ್ಷಿಸುತ್ತಾನೆ. | |
| | ವಿದ್ಯಾರ್ಥಿಯು ಮೈಸೂರು ರಾಜ್ಯದ ಪರಮೋಚ್ಛ ಅಧಿಕಾರ ಹಿಡಿದವರು ದಿವಾನ್ ಮಿರ್ಜಾ ಇಸ್ಮಾಯಿಲ್ ಎಂದು ಹೆಸರಿಸುತ್ತಾನೆ. | ಮೈಸೂರು ರಾಜ್ಯದ ಪರಮೋಚ್ಛ ಅಧಿಕಾರ ಹಿಡಿದವರು ಯಾರು? | ಮೈಸೂರು ರಾಜ್ಯದ ಪರಮೋಚ್ಛ ಅಧಿಕಾರ ಹಿಡಿದವರು ದಿವಾನ್ ಮಿರ್ಜಾ ಇಸ್ಮಾಯಿಲ್. | |
| | ವಿದ್ಯಾರ್ಥಿಯು ಮೇಧಾವಿ ಪದದ ಅರ್ಥ 'ಪಂಡಿತ' ಎಂದು ಅರ್ಥೈಸುತ್ತಾನೆ | "ಮೇಧಾವಿ" ಪದದ ಅರ್ಥವೇನು? | ಮೇಧಾವಿ ಪದದ ಅರ್ಥ 'ಪಂಡಿತ' | ಮಿರ್ಜಾರವರು ಯಾರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು? |

| | | | | |
|---|---|---|---|---|
| ***3. ಡಿ.ವಿ.ಜಿ ಅವರ ಜೀವನ ಹಿನ್ನೆಲೆ:***<br>ಡಿ. ವಿ.ಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಯ ಮುಳಬಾಗಿಲು. ತಂದೆ: ವೆಂಕಟರಮಣಯ್ಯ, ತಾಯಿ: ಅಲಮೇಲಮ್ಮ. ಇವರ ಮೇಲೆ ಇಬ್ಬರು ವ್ಯಕ್ತಿಗಳು ಪ್ರಭಾವ ಬೀರಿದವರು ಒಬ್ಬರು ಅವರ ತಾಯಿ, ಇನ್ನೊಬ್ಬರು ಅವರ ಅಜ್ಜಿ ಇವರ ಪ್ರಸಿದ್ಧ ಕೃತಿಯಾದ "ಮಂಕುತಿಮ್ಮನ ಕಗ್ಗ" ಕ್ಕೆ ಪ್ರೇರಣೆಯಾದ ಸೋದರಮಾವರಾದ ತಿಮ್ಮಪ್ಪನರೆ ಹಾಗಾಗಿ ಇವರು ಜನಪ್ರೀಯರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದರು. | ವಿದ್ಯಾರ್ಥಿಯು ಡಿ.ವಿ.ಜಿ ಅವರ ಜೀವನದ ಹಿನ್ನೆಲೆಯನ್ನು ಅರ್ಥಪೂರ್ಣವಾದ, ವಿಶ್ಲೇಷಣಾತ್ಮಕವಾಗಿ ವಿವರಣೆಯನ್ನು ಗಮನವಿಟ್ಟು ಆಲಿಸುತ್ತಾನೆ. | ಶಿಕ್ಷಕರು ಡಿ.ವಿ.ಜಿ ಅವರ ಜೀವನದ ಹಿನ್ನೆಲೆಯನ್ನು ಅರ್ಥಪೂರ್ಣವಾಗಿ, ವಿಶ್ಲೇಷಣಾತ್ಮಕವಾಗಿ ವಿವರಿಸುತ್ತಾರೆ. | ವಿದ್ಯಾರ್ಥಿಯು ಡಿ.ವಿ.ಜಿ ಅವರ ಜೀವನದ ಹಿನ್ನೆಲೆಯನ್ನು ಅರ್ಥಪೂರ್ಣವಾದ, ವಿಶ್ಲೇಷಣಾತ್ಮಕವಾಗಿ ವಿವರಣೆಯನ್ನು ಗಮನವಿಟ್ಟು ಆಲಿಸುತ್ತಾನೆ. | |
| | ವಿದ್ಯಾರ್ಥಿಯು ಕೋಲಾರ ಜಿಲ್ಲೆಯ ನಕ್ಷೆಯಲ್ಲಿ ಮುಳಬಾಗಿಲು ಪ್ರದೇಶವನ್ನು ಗುರುತಿಸುತ್ತಾನೆ. | ಶಿಕ್ಷಕರು ಕೋಲಾರ ಜಿಲ್ಲೆಯ ನಕ್ಷೆಯಲ್ಲಿ ಮುಳಬಾಗಿಲು ಪ್ರದೇಶವನ್ನು ತೋರಿಸುತ್ತಾರೆ.<br> | ವಿದ್ಯಾರ್ಥಿಯು ಕೋಲಾರ ಜಿಲ್ಲೆಯ ನಕ್ಷೆಯಲ್ಲಿ ಮುಳಬಾಗಿಲು ಪ್ರದೇಶವನ್ನು ವೀಕ್ಷಿಸುತ್ತಾನೆ. | |
| | ವಿದ್ಯಾರ್ಥಿಯು ಡಿ.ವಿ.ಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಯ ಮುಳಬಾಗಿಲು ಎಂದು ಹೆಸರಿಸುತ್ತಾನೆ. | **ಡಿ.ವಿ.ಜಿ ಅವರ ಹುಟ್ಟೂರು ಯಾವುದು?** | ಡಿ.ವಿ.ಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಯ ಮುಳಬಾಗಿಲು. | **ಡಿ.ವಿ.ಜಿ ಅವರ ಜೀವನ ಪರಿಚಯ ವನ್ನು ಸಂಕ್ಷಿಪ್ತವಾಗಿ ತಿಳಿಸಿರಿ.** |
| | ವಿದ್ಯಾರ್ಥಿಯು ಡಿ. ವಿ.ಜಿ ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿ ಅವರ ಸೋದರ ಮಾವ ತಿಮ್ಮಪ್ಪ ಎಂದು ಹೆಸರಿಸುತ್ತಾನೆ. | **ಡಿ. ವಿ. ಜಿ ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿ ಯಾರು?** | ಡಿ. ವಿ.ಜಿ ಅವರ ಮೇಲೆ ಪ್ರಭಾವ ಬೀರಿದ ವ್ಯಕ್ತಿ ಅವರ ಸೋದರ ಮಾವ ತಿಮ್ಮಪ್ಪ. | |

| | | | | |
|---|---|---|---|---|
| *4 . ವ್ಯಾಕರಣಾಂಶ*<br>ಪೂರ್ವೋತ್ತರ ಪದಗಳು ಸೇರಿ ಸಂಧಿಯಾಗುವಾಗ ಪರಸ್ಪರ ಸವರ್ಣಗಳು ಎದುರಾಗಿ ಅದೇ ಜಾತಿಯ ವರ್ಣವು ದೀರ್ಘಾಕ್ಷರವಾಗಿ **ಬರುವುದನ್ನು** “ಸವರ್ಣದೀರ್ಘಸಂಧಿ” ಎಂದು ಕರೆಯುತ್ತೇವೆ. | ವಿದ್ಯಾರ್ಥಿಯು ಸವರ್ಣದೀರ್ಘಸಂಧಿಯ ನಿಯಮವನ್ನು ವ್ಯಾಖ್ಯಾನಿಸುತ್ತಾನೆ.<br><br>ವಿದ್ಯಾರ್ಥಿಯು ಸವರ್ಣದೀರ್ಘಸಂಧಿಯ ನಿಯಮದ ತೂಗುಪಟವನ್ನು ಗಮನವಿಟ್ಟು ಓದುತ್ತಾನೆ. | ಶಿಕ್ಷಕರು ಸವರ್ಣದೀರ್ಘಸಂಧಿಯನ್ನು ಅನುಗಮನ ಪದ್ಧತಿಯು ಮೂಲಕ ವಿಶ್ಲೇಷಿಸುತ್ತಾರೆ<br><br>ಶಿಕ್ಷಕರು ಸವರ್ಣದೀರ್ಘಸಂಧಿಯ ನಿಯಮದ ತೂಗುಪಟವನ್ನು ತೋರಿಸುತ್ತಾರೆ. | ವಿದ್ಯಾರ್ಥಿಯು ಸವರ್ಣದೀರ್ಘಸಂಧಿಯ ವಿಶ್ಲೇಷಣೆಯನ್ನು ಗಮನವಿಟ್ಟು ಆಲಿಸುತ್ತಾನೆ.<br><br>ವಿದ್ಯಾರ್ಥಿಯು ಸವರ್ಣದೀರ್ಘಸಂಧಿಯ ನಿಯಮದ ತೂಗುಪಟವನ್ನು ಗಮನವಿಟ್ಟು ವೀಕ್ಷಿಸುತ್ತಾನೆ. | ಸವರ್ಣದೀರ್ಘ ಸಂಧಿ ಎಂದರೇನು ? |
| ***ಉದಾಹರಣೆಗಳ ಸಂಗ್ರಹ***<br>❖ ಕವೀಂದ್ರ<br>❖ ಗಜಾನನ<br>❖ ಗ್ರಂಥಾಲಯ<br>❖ ದೇವಾಲಯ<br><br>: | ***ಉದಾಹರಣೆಗಳ ಪರಿಶೀಲನೆ***<br>❖ ಕವಿ + ಇಂದ್ರ (ಇ+ಇ)<br>❖ ಗಜ + ಆನನ (ಅ+ಆ)<br>❖ ಗ್ರಂಥ + ಆಲಯ (ಅ+ಆ)<br>❖ ದೇವ + ಆಲಯ (ಅ+ಆ) | ***ಲಕ್ಷಣಗಳು***<br>❖ ಪೂರ್ವೋತ್ತರ ಪದಗಳಿರುತ್ತವೆ.<br>❖ ಪರಸ್ಪರ ಸವರ್ಣಗಳು ಎದುರಾಗುತ್ತವೆ.<br>❖ ಅದೇ ಜಾತಿಯ ವರ್ಣಗಳು ಆದೇಶವಾಗಿ ಬರುತ್ತದೆ. | ***ನಿಯಮ***<br>ಪೂರ್ವೋತ್ತರ ಪದಗಳು ಸೇರಿ ಸಂಧಿಯಾಗುವಾಗ ಪರಸ್ಪರ ಸವರ್ಣಗಳು ಎದುರಾಗಿ ಅದೇ ಜಾತಿಯ ವರ್ಣವು ದೀರ್ಘಾಕ್ಷರವಾಗಿ ಬರುವುದನ್ನು “ಸವರ್ಣದೀರ್ಘಸಂಧಿ” ಎಂದು ಕರೆಯುತ್ತೇವೆ | ***ಉದಾಹರಣೆಗಳ ಸಂಗ್ರಹ***<br>• ಸುರಾಸುರ<br>•ಮಂತ್ರಾಲಯ<br>• ಪದ್ಮಾಸನ<br>• ಮಹಾತ್ಮ |

**ಅಂತಿಮ ಹೇಳಿಕೆ** : ಹಾಗಾದರೆ ಪ್ರೀತಿಯ ವಿದ್ಯಾರ್ಥಿಗಳೆ ಇಂದಿನ ತರಗತಿಯಲ್ಲಿ ನಾವು ಡಾ. ಎನ್.ಎಸ್.ಲಕ್ಷೀನಾರಾಯಣ ಭಟ್ಟ್‌ರವರು ರಚಿಸಿದ "ಸಾರ್ಥಕ ಬದುಕಿನ ಸಾಧಕ" ಗದ್ಯಭಾಗದಲ್ಲಿ, ಕವಿ ಪರಿಚಯ, ಡಿ.ವಿ.ಜಿ ಹಾಗೂ ಮಿರ್ಜಾ ಇಸ್ಮಾಯಿಲ್‌ರ ಸ್ನೇಹ ಸಂಬಂಧ, ಡಿ.ವಿ.ಜಿ ಯವರ ಜೀವನ ಶೈಲಿ ಮತ್ತು ವ್ಯಾಕರಣಾಂಶದಲ್ಲಿ ಸವರ್ಣದೀರ್ಘ ಸಂಧಿಯ ಕುರಿತು ತಿಳಿದುಕೊಂಡೆವು.

**ಸಾರಾಂಶ** : ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ತಂದೆ ಶಿವರಾಮಭಟ್ಟ, ತಾಯಿ ಮೂಕಾಂಬಿಕೆ. ಡಿ.ವಿ.ಜಿಯವರ ಕಾಲದಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದವರು ದಿವಾನ್ ಮಿರ್ಜಾಇಸ್ಮಾಯಿಲ್ ಇವರ ಹಾಗೂ ಡಿ.ವಿ.ಜಿಯವರ ಸ್ನೇಹಸಂಬಂಧ ಬಹಳ ಉತ್ತಮವಾಗಿತ್ತು. ಇವರಿಬ್ಬರೂ ಮಾತನಾಡುವುದನ್ನು ಬಿಟ್ಟು ಹಗಲಿರುಳು ಅದಕ್ಕಾಗಿ ಪರಿತಪಿಸುವ ಬಗೆ ಮಾತ್ರ ವಿಷಾದನೀಯವಾಗಿತ್ತು. ಡಿ.ವಿ.ಜಿ.ಯವರು ಸರಳ ಜೀವನ ಉದಾತ್ತ ಚಿಂತನೆ ಎಂದು ಹೇಳಬಹುದು. ಪೂರ್ವೋತ್ತರ ಪದಗಳು ಸೇರಿ ಸಂಧಿಯಾಗುವಾಗ ಪರಸ್ಪರ ಸವರ್ಣಗಳು ಎದುರಾಗಿ ಅದೇ ಜಾತಿಯ ವರ್ಣಗಳು ಆದೇಶವಾಗಿ ಬರುವುದನ್ನು "ಸವರ್ಣದೀರ್ಘಸಂಧಿ" ಎಂದು ಕರೆಯುತ್ತೇವೆ. ಉದಾಹರಣೆಗಳೆಂದರೆ ದೇವಾಲಯ, ಗುರೂಪದೇಶ, ಗಿರೀಶ, ಇನ್ನು ಮುಂತಾದವುಗಳು.

**ಪ್ರಶ್ನೆಗಳು** :

- ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ತಂದೆ ತಾಯಿಯ ಹೆಸರೇನು?
- ಡಿ .ವಿ. ಜಿಯವರ ಕಾಲದಲ್ಲಿ ಮೈಸೂರು ಸಂಸ್ಥಾನದ ದಿವಾನರಾಗಿದ್ದವರು ಯಾರು?
- ಡಿ. ವಿ. ಜಿ ಹಾಗೂ ಮಿರ್ಜಾರ ಸ್ನೇಹ ಎಂತದ್ದು?
- ಡಿ .ವಿ. ಜಿಯವರ ಜೀವನಶೈಲಿ ಎಂತದ್ದು?
- ಸವರ್ಣದೀರ್ಘಸಂಧಿಗೆ ಉದಾಹರಣೆಗಳನ್ನು ಕೊಡಿ.

**ಅಂತಿಮ ಮೌಲ್ಯಮಾಪನ**

ಶಿಕ್ಷಕರು ಹೇಳಿಕೊಟ್ಟಂತೆ ವಿದ್ಯಾರ್ಥಿಯು ಪ್ರಸುತ ಗದ್ಯಭಾಗವನ್ನು ಸೂಕ್ತ ಸ್ವರಭಾರದೊಂದಿಗೆ ಗಟ್ಟಿಯಾಗಿ ಓದುತ್ತಾನೆ.

**ಅಭ್ಯಾಸ ಪ್ರಶ್ನೆಗಳು**

1. ನಿಮಗೆ ಗೊತ್ತಿರುವ ಯಾವುದಾದರೂ ಸ್ನೇಹ ಸಂಬಂಧದ ಕುರಿತು ಪ್ರಬಂಧ ಬರೆಯಿರಿ.
2. ಸವರ್ಣದೀರ್ಘಸಂಧಿ ಎಂದರೇನು? ಉದಾಹರಣೆಗಳೊಂದಿಗೆ ವಿಷದೀಕರಿಸಿ.

**ವೀಕ್ಷಕರ ಸಲಹೆಗಳು**

**ವೀಕ್ಷಕರ ಸಹಿ ಮತ್ತು ದಿನಾಂಕ**